## <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>

## <u>ಸಿಸಿ ನಂ.2066/2021</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ತನವೀರ ಪಟೇಲ್ ತಂದೆ ಗೌಸಪಟೇಲ್
ವಃ 50 ವರ್ಷ, ಉಃ ಕೂಲಿ ಕೆಲಸ

2. ಮೋನಿಪಟೇಲ್ @ ಮೋಜಮ ತಂದೆ ತನ್ವಿರ ಪಟೇಲ್
ವಃ 22 ವರ್ಷ, ಉಃ ಲಾರಿ ಚಾಲಕ

3. ಸಾಜಿದಾಬೇಗಮ ಗಂಡ ತನ್ವಿರ ಪಟೇಲ್
ವಃ 45 ವರ್ಷ, ಉಃ ಮನೆ ಕೆಲಸ
ಎಲ್ಲರೂ ಸಾಃ ತುರ್ಕ ಬೊಮ್ಮನಳ್ಳಿ ಗ್ರಾಮ
ತಾಃ ಸೇಡಂ

----

### <u>ದೋ ಷಾ ರೋ ಪ ಣೆ</u>

ನಾನು **ಶ್ರೀ ಬಾಲು**, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 13-09-2021 ರಂದು ಸಾಯಂಕಾಲ 04-00 ಗಂಟೆ ಸುಮಾರಿಗೆ ತುರ್ಕಬೊಮ್ಮನಳ್ಳಿ ಗ್ರಾಮದಲ್ಲಿ ಪಿರ್ಯಾದಿಯ ಮನೆಯ ಮುಂದುಗಡೆ ಸಾರ್ವಜನಿಕ ರಸ್ತೆಯಲ್ಲಿ ಚಾಸಾ.1 ನೇದ್ದವಳು ಹೊರಗಡೆಯಿಂದ ತಮ್ಮ ಮನೆಗೆ ನಡೆದುಕೊಂಡು ಬರುವಾಗ ಆರೋಪಿ.1 ರಿಂದ 3ರವರು ಕೂಡಿ ಬಂದು ಚಾಸಾ.1 ನೇದ್ದವಳಿಗೆ ರಸ್ತೆಯಲ್ಲಿ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 341 ಸಂಗಡ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಂದು, ಆರೋಪಿ.3 ನೆದ್ದವಳು ಚಾಸಾ.1 ನೇದ್ದವಳಿಗೆ ನೀನು ನಮ್ಮ ಅಣ್ಣನಿಗೆ ಹೇಳಿ ನನಗೆ ಮನೆಗೆ ಬರದಂತೆ ಮಾಡಿದ್ದಿ ನಿನ್ನಿಂದ ನಾವು ಅಣ್ಣ ತಂಗಿ ದೂರ ಆಗಿದ್ದೇವೆ ಅಂತಾ ಜಗಳಕ್ಕೆ ಬಿದ್ದು ಚಾಸಾ.1 ನೇದ್ದವಳ ಕೈ ಹಿಡಿದು ಎಳೆದಾಡಿ ತಲೆಯ ಕೂದಲು ಹಿಡಿದು ಎಳೆದು ಹಿಡಿದುಕೊಂಡಿದ್ದು, ಆರೋಪಿ.2 ಮತ್ತು 3ರವರು ಚಾಸಾ.1 ನೆದ್ದವಳಿಗೆ ಕೈಯಿಂದ ಎರಡು ಕಪಾಳಕ್ಕೆ ಹಾಗೂ ತಲೆಗೆ ಹೊಡೆ ಬಡೆ ಮಾಡಿದ್ದು ಹಾಗೂ ಆರೋಪಿತರು ಚಾಸಾ.1 ನೆದ್ದವಳಿಗೆ ರಸ್ತೆಯಲ್ಲಿ ಕೆಳಗೆ ಹಾಕಿ ಕಾಲಿನಿಂದ ಒದ್ದು ಕೈಯಿಂದ ಹೊಡೆ ಬಡೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ,

ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ.3 ನೇದ್ದವಳು ಚಾಸಾ.1 ನೆದ್ದವಳಿಗೆ ರಂಡಿ, ಬೋಸಡಿ ಅಂತಾ ಅವಾಚ್ಯವಾಗಿ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ.2 ಮತ್ತು 3 ನೇದ್ದವರು ಚಾಸಾ.1 ನೆದ್ದವಳಿಗೆ ರಂಡಿ ಇವತ್ತು ನಿನಗೆ ಬಿಡುವುದಿಲ್ಲಾ ಹೊಡೆದು ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 16-10-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.2066/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ತನವೀರ ಪಟೇಲ್ ತಂದೆ ಗೌಸಪಟೇಲ್
ವಃ 50 ವರ್ಷ, ಉಃ ಕೂಲಿ ಕೆಲಸ
ಸಾಃ ತುರ್ಕ ಬೊಮ್ಮನಳ್ಳಿ ಗ್ರಾಮ
ತಾಃ ಸೇಡಂ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 16-10-2025 ಪ್ರ.ದ.ನ್ಯಾ.ದಂ. ಸೇಡಂ.